ಶ್ರೀ ಬಿ. ಎಸ್. ಯಡಿಯೂರಪ್ಪ : ಇದುವರೆಗೆ ಆ ಕಡೆ ಮತ್ತು ಈ ಕಡೆಯ ಜುನಾಯಿತ ಸದಸ್ಯರು ಮಾತ್ರ ನಿಮ್ಮನ್ನು ಪ್ರತಿಭಟನೆ ಮಾಡುತ್ತಿದ್ದರು. ವಿರೋಧ ಮಾಡುತ್ತಿದ್ದರು. ಈಗ ನಿಮ್ಮ ಅಧಿಕಾರಿಗಳೂ ತಪ್ಪು ಮಾಹಿತಿ ಕೊಟ್ಟು ನಿಮಗೆ ವಿರೋಧವನ್ನು ವ್ಯಕ್ತಪಡಿಸುತ್ತಿದ್ದಾರೆ. ಇದರ ಬಗ್ಗೆ ತಾವು ತುಂಬಾ ಜಾಗೃತರಾಗಿರುವುದು ಒಳ್ಳೆಯದು.

ವಿಷಯ : ಧಾರವಾಡದ ಕೃಷಿ ವಿಶ್ವವಿದ್ಯಾನಿಲಯಕ್ಕೆ ನಾಮಕರಣ

ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ – ೨೦೦ (೬೯೭)

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ): ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡದ ಕೃಷಿ ವಿಶ್ವವಿದ್ಯಾನಿಲಯಕ್ಕೆ "ಜವಾಹರಲಾಲ ನೆಹರು ಕೃಷಿ ವಿಶ್ವವಿದ್ಯಾನಿಲಯ" ಎಂದು ನಾಮಕರಣ ಮಾಡಲು ಸರ್ಕಾರಕ್ಕಿರುವ ತೊಂದರೆ ಏನು ?

ಆ) ಕೃಷಿ ವಿಶ್ವವಿದ್ಯಾನಿಲಯಕ್ಕೆ ಕೊಡಬೇಕಾಗಿದ್ದ ಹಣವನ್ನು ನಿಗಧಿತ ವೇಳೆಯಲ್ಲಿ ಕೊಡಲು ಸರ್ಕಾರಕ್ಕಿರುವ ತೊಂದರೆ ಏನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :

ಅ) ಈ ವಿಷಯ ಸರ್ಕಾರದ ಮುಂದೆ ಇಲ್ಲ

ಆ) ಸಾಧ್ಯವಾದ ಮಟ್ಟಿಗೆ ಅನುದಾನವನ್ನು ಕಾಲಕಾಲಕ್ಕೆ ಬಿಡುಗಡೆ ಮಾಡಲಾಗುತ್ತಿದೆ.

ಶ್ರೀ ಎಂ. ಎಸ್. ಪಾಟೀಲ : ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ಜವಾಹರಲಾಲ್ ನೆಹರೂರವರ ಹೆಸರನ್ನು ಇಡುವ ಬಗ್ಗೆ ಸರಕಾರದ ಮುಂದಿದೆಯೇ, ಎಂದು ಕೇಳಿದ್ದಕ್ಕೆ ಅದು ಸರಕಾರದ ಮುಂದಿಲ್ಲವೆಂದು ಹೇಳುತ್ತಾರೆ ನಾನು ಕೇಳಿದ ಪ್ರಶ್ನೆ ಬೇರೆ. ಅವರು ಕೊಟ್ಟಿರುವ ಉತ್ತರ ಬೇರೆ. ಇದಕ್ಕೆ ಏನು ತೊಂದರೆ ಇದೆ ಎಂದು ನಾನು ಕೇಳಿದ್ದೇನೆ. ಅದಕ್ಕೆ ಇದು ಸರಕಾರದ ಮುಂದಿಲ್ಲವೆಂದು ಹೇಳಿದ್ದಾರೆ. ಭಾರತದ ಪ್ರಥಮ ಪ್ರಧಾನಿ ನೆಹರೂಜಿಯವರ ಹೆಸರನ್ನು ಕೃಷಿ ವಿಶ್ವವಿದ್ಯಾನಿಲಯಕ್ಕೆ ಇಡಲು ಏನು ತೊಂದರೆ ಇದೆ. ಇದರ ಬಗ್ಗೆ ನಾನು ಸಲ ರೆಸಲ್ಯೂಷನ್ ಅನ್ನು ಮಾಡಿ ಮೂವ್ ಮಾಡಿದ್ದೇವೆ. ಸರಕಾರಕ್ಕೆ ಪತ್ರವ್ಯವಹಾರ ಮಾಡಿದ್ದೇನೆ. ಸರಕಾರ ಈಗಲಾದರೂ ಮುಂದಾಗಿ ಕೃಷಿ ವಿಶ್ವವಿದ್ಯಾನಿಲಯಕ್ಕೆ ನೆಹರೂಜಿಯವರ ಹೆಸರನ್ನು ಇಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ನೆಹರೂಜಿಯವರ ಹೆಸರನ್ನು ಇಡಬೇಕೆಂದು ಈಗ ತಾನೆ ಸಲಹೆಯನ್ನು ಕೊಟ್ಟಿದ್ದಾರೆ.

ಇದು ಉತ್ತಮವಾದ ಸಲಹೆ. ಈ ಸಲಹೆಯನ್ನು ಸರಕಾರದ ಮುಂದೆ ತಂದು ಪರಿಶೀಲಿಸಲಾಗುವುದು.

ಶ್ರೀ ಶಿವಾನಂದ ಎಚ್. ಕೌಜಲಗಿ : ಉತ್ತರ ಕರ್ನಾಟಕದವರು ಬಸವೇಶ್ವರ ವಿಶ್ವವಿದ್ಯಾನಿಲಯವೆಂದು ಇಡಬೇಕೆಂಬ ಬಗ್ಗೆ ಮೊದಲಿನಿಂದ ಕೇಳುತ್ತಿದ್ದಾರೆ. ಬಸವೇಶ್ವರ ವಿಶ್ವವಿದ್ಯಾನಿಲಯವೆಂದು ಇಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ. ಎಸ್. ಪಾಟೀಲ್ : ಇದು ಪರಿಶೀಲನೆ ಮಾಡುವ ಪ್ರಶ್ನೆ ಅಲ್ಲ. ಇದರ ಬಗ್ಗೆ ೨-೩ ರೆಸಲ್ಯೂಷನ್ ಅನ್ನು ಮೂವ್ ಮಾಡಿದ್ದೇವೆ. ಸರಕಾರದ ಗಮನಕ್ಕೆ ಕೂಡ ತಂದಿದ್ದೇನೆ. ಕಳೆದ ವರ್ಷ ನೆಹರೂಜಿಯವರ ನೂರು ವರ್ಷದ ಹುಟ್ಟುಹಬ್ಬವನ್ನು ಇಡೀ ರಾಷ್ಟ್ರವ್ಯಾಪ್ತಿ ಆಚರಿಸಿದ್ದೇವೆ. ಅಂತಹ ಸಂದರ್ಭವಿದ್ದಾಗ ಇದನ್ನು ಪರಿಶೀಲನೆ ಮಾಡುವ ಪ್ರಶ್ನೆಯೇ ಇಲ್ಲ. ಸರಕಾರ ಇಂತಹ ಮಹತ್ವವಾದ ನಿರ್ಧಾರವನ್ನು ಮಾಡಬೇಕಾಗುತ್ತದೆ. ಆ ಭಾಗದಿಂದ ಬಂದಂತಹ ಮಾನ್ಯ ಕೆ. ಹೆಚ್. ಪಾಟೀಲರಲ್ಲಿ ಕೂಡ ನಾನು ವಿನಂತಿ ಮಾಡುತ್ತೇನೆ. ಸರಕಾರದ ಜೊತೆಯಲ್ಲಿ ಹಟ ಹಿಡಿದು ಏನಾದರೂ ಇದರ ಬಗ್ಗೆ ಮಾಡಬೇಕೆಂದು ಮಾನ್ಯ ಪಾಟೀಲರನ್ನು ಕೇಳುತ್ತಿದ್ದೇನೆ.

ಶ್ರೀ ಕೆ. ಹೆಚ್. ಪಾಟೀಲ್ : ಇದು ಒಳ್ಳೆಯ ಸಲಹೆ ಎಂದು ಮಾನ್ಯ ಮಂತ್ರಿಗಳು. ಹೇಳಿದ್ದಾರೆ ಇದರ ಬಗ್ಗೆ ತೀವ್ರವಾಗಿ ಸರಕಾರ ಈ ವಿಷಯವನ್ನು ಪರಿಶೀಲನೆ ಮಾಡಿ ಕಾಳಜಿ ವಹಿಸಿ ಕೆಲಸ ಮಾಡುತ್ತದೆ.

ಅಧ್ಯಕ್ಷರು : ಮಾನ್ಯ ಎಂ. ಎಸ್. ಪಾಟೀಲ್‌ರೆ, ಮಾನ್ಯ ಕೆ. ಹೆಚ್. ಪಾಟೀಲರು ಎರಡು ವಿಚಾರ ಹೇಳಿದ್ದಾರೆ ತಮ್ಮ ವಿಚಾರ ಚಲೋ ಇದೆ. ಶೀಘ್ರವಾಗಿ ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಎಂ. ಎಸ್. ಪಾಟೀಲ್ : ನಾನು ತಮ್ಮಲ್ಲಿ ಕೂಡ ವಿನಂತಿ ಮಾಡುತ್ತೇನೆ ತಾವೂ ಕೂಡ ಇದರ ಬಗ್ಗೆ.....

ಪ್ರಶ್ನೆ ೨೦೨ (೭೦೫)

ಮಾನ್ಯ ಸದಸ್ಯರು ಗೈರು ಹಾಜರು.

Mr. Speaker: Question No. 202 (705) Minister for Co-operation to reply.

Shri K. H. Patil : Sir, again this is a subject which has already been transferred and it is not with me.